ವಿರಾಮದಲ್ಲಿ ಪೇಪರ್ ಓದುತ್ತಿದ್ದಳು. ಗೇಟಿನ ಸರಳಿನ ಆಚೆಗೆ ನೈಟಿ ತೊಟ್ಟ ಹೆಣ್ಣುಮಗಳೊಬ್ಬರು ಅತ್ತಿಂದಿತ್ತ ಅಡ್ಡಾಡುತ್ತಿದ್ದುದು ಅವಳ ಗಮನಕ್ಕೆ ಬಂತು. ಎದ್ದು ಗೇಟಿನ ಬಳಿ ಬಂದಳು. ಆ ಹೆಂಗಸು ಗೀತಾಳನ್ನು ಕೇಳಿದಳು.

'ರಾಜಲಕ್ಷ್ಮಿ ಬೇಕಾಗಿತ್ತು.'

'ಓ, ಬನ್ನಿ ಒಳಗೆ, ಇವತ್ತು ಡ್ರೈವರ್ ಇರಲಿಲ್ಲ. ಮಕ್ಕಳನ್ನ ಸ್ಕೂಲಿಗೆ ಬಿಟ್ಟು ಬರಲು ಹೋಗಿದ್ದಾಳೆ, ಕೂತುಕೊಳ್ಳಿ, ಬರೋದಿಕ್ಕೆ ಸಮಯ ಆಗಬಹುದು.' ಹರಡಿದ್ದ ಪೇಪರ್ ಮಡಿಸಿಟ್ಟಳು.

'ನೀವು ಗೀತಾ ಅಲ್ವಾ? ನಿಮ್ಮ ವಿಚಾರನೆಲ್ಲ ನಂಗೆ ರಾಜಿ ಹೇಳತಿರತಾಳೆ. ನನ್ನ ಹೆಸ್ರು ಪದ್ಮಾ.'

'ಓ... ನೀವು ಎಲ್ಲಿದೀರಿ? ರಾಜಿ ಮನೆ ಹತ್ರನಾ?'

'ಹೂಂ ರೀ... ನಮ್ಮದು ಗೊಲ್ಲಹಳ್ಳಿ. ಈಗದು ದೇವಿನಗರ ಆಗಿದೆ ಅನ್ನಿ. ರಾಜಿ ನಮ್ಮ ಪಕ್ಕದ ಬೀದೀಲೇ ಇರದು. ಇದೆಲ್ಲ, ಮೊದ್ಲು ನಮ್ಮನೆ ಗದ್ದೆಗಳು. ಗೆದ್ದಲಹಳ್ಳಿ ಅನ್ನೋರು ಇತ್ತಕಡೆ ಊರನ್ನ, ಅತ್ತಕಡೆದನ್ನ ಗೊಲ್ಲಹಳ್ಳಿ ಅನ್ನೋರು. ಮಧ್ಯದಲ್ಲಿ ದೊಡ್ಡ ಕಾಲುವೆ ಹರ್‍ಯೋದು. ಈ ಮಾವಿನಮರ ನೋಡಿ, ನಮ್ಮ ತಾತ ಹಾಕಿದ್ದು. ಇಲ್ಲಿ ಒಂದು ಕಪಿಲೆ ಬಾವಿ ಇತ್ತು. ಮಳೆಗಾಲದಲ್ಲಿ ಈ ಗದ್ದೇಲಿ ಭತ್ತ ಬೆಳೆದ್ರೆ ಬೇಸಿಗೆ ವಳಗೆ ಈ ಕಪಿಲೆ ಬಾವಿ ನೀರು ಹರಿಸಿ ಒಳ್ಳೆ ತರಕಾರಿ ಬೆಳಿತಿದ್ವಿ. ಎರಡು ಜೋಡಿ ಎತ್ತಿದ್ವು. ದನಕರುಗಳನ್ನು ಅಟ್ಕಂಡು ನಮ್ಮನೇವು ಅಷ್ಟೂ ಜನ ಬೆಳಿಗ್ಗೆ ಇತ್ತಲಾಗೆ ಗದ್ದೆಹಳ್ಳಕ್ಕೆ ಬಂದುಬಿಟ್ರೆ ಸಂಜೆ

